**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1965 |
| 2. | ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : | 24.03.2026 |
| 4. | ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು; ಆ ಪೈಕಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಮುಚ್ಚಲ್ಪಟ್ಟಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಖಾನೆಗಳು ಉತ್ಪಾದಿಸಿದ ಒಟ್ಟು ಸಕ್ಕರೆ ಎಷ್ಟು (ಮೆಟ್ರಿಕ್ ಟನ್ ಗಳಲ್ಲಿ); | ರಾಜ್ಯದಲ್ಲಿ ಒಟ್ಟು 98 ಸಕ್ಕರೆ ಕಾರ್ಖಾನೆಗಳು ನೋಂದಣಿಗೊಂಡಿರುತ್ತವೆ. ಇವುಗಳ ಪೈಕಿ 2025-26ನೇ ಹಂಗಾಮಿನಲ್ಲಿ 81 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. 12 ಸಕ್ಕರೆ ಕಾರ್ಖಾನೆಗಳು ಸ್ಥಗಿತಗೊಂಡಿರುತ್ತವೆ ಮತ್ತು 05 ಸಕ್ಕರೆ ಕಾರ್ಖಾನೆಗಳು ಸಮಾಪನೆಯಲ್ಲಿರುತ್ತವೆ.<br><br>ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆ ಪ್ರಮಾಣದ ವಿವರಗಳು ಈ ಕೆಳಗಿನಂತಿರುತ್ತದೆ.<br><br>**ಕ್ರ. ಸಂ** / **ವರ್ಷ** / **ಉತ್ಪಾದಿಸಿದ ಸಕ್ಕರೆ ಪ್ರಮಾಣ (ಲಕ್ಷ ಮೆ.ಟನ್‌ಗಳಲ್ಲಿ)**<br>1 / 2023-24 / 52.96<br>2 / 2024-25 / 41.83<br>3 / 2025-26 (ದಿ:28.02.2026ಕ್ಕೆ ಇದ್ದಂತೆ) / 47.35 |
| ಆ) | ಭಾರತದ ಒಟ್ಟು ಉತ್ಪಾದನೆಗೆ ಸಂಬಂಧಿಸಿದಂತೆ ಎಥೆನಾಲ್ ಮಿಶ್ರಣ ಯೋಜನೆಯಲ್ಲಿ ಕರ್ನಾಟಕ ರಾಜ್ಯದ ಪಾಲು ಎಷ್ಟು; ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಎಥೆನಾಲ್ ಉತ್ಪಾದಿಸುತ್ತಿವೆ; | 2025-26ನೇ ಎಥೆನಾಲ್ ಪೂರೈಕೆ ವರ್ಷದ(ESY) ಮೊದಲ ಹಂತದ ಟೆಂಡರ್‌ನಲ್ಲಿ ತೈಲ ಮಾರುಕಟ್ಟೆ ಕಂಪನಿಗಳು(OMCs) ರಾಷ್ಟ್ರಮಟ್ಟದಲ್ಲಿ ಒಟ್ಟು 1,048 ಕೋಟಿ ಲೀಟರ್ ಎಥೆನಾಲ್ ಅನ್ನು ಹಂಚಿಕೆ ಮಾಡಿರುತ್ತವೆ. ಕೇಂದ್ರ ಸರ್ಕಾರವು ಪೆಟ್ರೋಲ್ ನೊಂದಿಗೆ ಎಥನಾಲ್ ಮಿಶ್ರಣದ ಗುರಿಯನ್ನು ಶೇ.20 ರಷ್ಟು ನಿಗದಿಪಡಿಸಿರುತ್ತದೆ. ದೇಶದ ಒಟ್ಟಾರೆ ಶೇ.20ರಷ್ಟು (E20) ಎಥೆನಾಲ್ ಮಿಶ್ರಣದ ಗುರಿಯನ್ನು ತಲುಪುವಲ್ಲಿ ಕರ್ನಾಟಕ ರಾಜ್ಯವು ಅಂದಾಜು ಶೇ.13 ರಿಂದ 15 ರಷ್ಟು ಪಾಲು ಹೊಂದಿದೆ. ರಾಜ್ಯದ 42 ಸಕ್ಕರೆ ಕಾರ್ಖಾನೆಗಳಲ್ಲಿ ಎಥೆನಾಲ್ ಉತ್ಪಾದಿಸಲಾಗುತ್ತಿದೆ. |

| | | |
|---|---|---|
| ಇ) | 2025-2026ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ರೈತರಿಗೆ ಪಾವತಿಸಬೇಕಾದ ಬಾಕಿ ಮೊತ್ತ ಎಷ್ಟು? | 2025-26ನೇ ಹಂಗಾಮಿನಲ್ಲಿ 81 ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಕಾರ್ಯವನ್ನು ನಿರ್ವಹಿಸಿದ್ದು, ದಿನಾಂಕ:28.02.2026ಕ್ಕೆ ಇದ್ದಂತೆ ಒಟ್ಟು 550.06 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿ 47.35 ಲಕ್ಷ ಮೆ.ಟನ್ ಸಕ್ಕರೆ ಉತ್ಪಾದಿಸಿರುತ್ತವೆ. ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ ರೂ.22171.14 ಕೋಟಿಗಳಾಗಿರುತ್ತದೆ. ಈ ಪೈಕಿ ರೂ.17430.84 ಕೋಟಿಗಳಷ್ಟು ಪಾವತಿಯಾಗಿದ್ದು, ಇನ್ನು ರೂ.4746.08 ಕೋಟಿಯಷ್ಟು ಪಾವತಿಸಬೇಕಾಗಿರುತ್ತದೆ. |

**ಸಂಖ್ಯೆ:** ಸಿಐ 122 ಎಸ್‌ಜಿಎಫ್ 2026

**(ಶಿವಾನಂದ ಎಸ್ ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು